# ದೆವ್ವದ ಜೊತೆ ಸರಸ





ನಾ ನಿನ್ನ ಬಿಡಲಾರೆ' ಅಂದ ಕೂಡಲೇ ನೆನಪಾಗುವುದು ಅನಂತನಾಗ್-ಲಕ್ಷ್ಮಿ ಅಭಿನಯದ ಸೂಪರ್ ಹಿಟ್ ಚಲನಚಿತ್ರ. ಇಂಥದೇ ಕಥಾಹಂದರ ಹೊಂದಿರುವ ಧಾರಾವಾಹಿ ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ನಾ ನಿನ್ನ ಬಿಡಲಾರೆ.'

ಪ್ರೀತಿಸಿದ ಹುಡುಗ ಸಿಗದೆ ಆಕಸ್ಮಿಕವಾಗಿ ಸಾವನ್ನಪ್ಪಿದ ಕಾಂಚನಾ ದೆವ್ವದ ರೂಪದಲ್ಲಿ ಮತ್ತೆ ಬಂದು ತನ್ನ ಪ್ರಿಯಕರ ಅಕ್ಷಯ್ ಹಾಗೂ ಆತನ ಪತ್ನಿ ನಂದಿನಿಯನ್ನು ಕಾಡುತ್ತಾಳೆ. ಅವರಿಗೆ ಕಷ್ಟಗಳನ್ನು ಕೊಡುತ್ತಾ ನಂದಿನಿಯನ್ನು ಸಾಯಿಸಿ ತಾನೇ ಅಕ್ಷಯ್‌ಗೆ ಹೆಂಡತಿಯಾಗಬೇಕು ಎಂಬುದೇ ಕಾಂಚನಾಳ ಗುರಿ.

ಸಿದ್ಧಿವಿನಾಯಕನ ಪರಮಭಕ್ತೆ ನಂದಿನಿ. ತನ್ನ ಮನೆಯವರ ವಿರೋಧದ ಮಧ್ಯೆಯೂ ಅಕ್ಷಯ್ ನಂದಿನಿಯನ್ನು ಮದುವೆ ಆಗಿರುತ್ತಾನೆ. ಇವರಿಬ್ಬರ ಜೀವನದಲ್ಲಿ ಬಿರುಗಾಳಿಯಂತೆ ಎಂಟ್ರಿ ಕೊಡುತ್ತಾಳೆ ಕಾಂಚನಾ. ಕಾಂಚನಾ ದೆವ್ವ ಎಂಬ ವಿಷಯ ತಿಳಿಯದ ಅಕ್ಷಯ್ ಮತ್ತು ನಂದಿನಿ ಅವಳನ್ನು ತಮ್ಮ ಮನೆಯೊಳಗೆ ಸೇರಿಸಿಕೊಳ್ಳುತ್ತಾರೆ. ಕಾಂಚನಾ ತನ್ನ ಶಕ್ತಿಯಿಂದ ಇವರಿಬ್ಬರ ಜೀವನದಲ್ಲಿ ಬಿರುಗಾಳಿ ಎಬ್ಬಿಸುತ್ತಾಳೆ, ಬಿರುಕನ್ನು ಉಂಟು ಮಾಡುತ್ತಾಳೆ. ಅಕ್ಷಯ್ ಮನೆಯವರನ್ನು ತನ್ನ ದಾಳದಲ್ಲಿ ಸಿಕ್ಕಿಸಿ ನಂದಿನಿ ಎದುರು ಎತ್ತಿ ಕಟ್ಟುತ್ತಾಳೆ. ತನ್ನ ಗಂಡ ಹಾಗೂ ಮನೆಯವರನ್ನು ಉಳಿಸಿಕೊಳ್ಳಲು ನಂದಿನಿ ದೇವರ ಮೊರೆ ಹೋಗುತ್ತಾಳೆ.

'ಯಶೋಧೆ' ಧಾರಾವಾಹಿಯಲ್ಲಿ ಯಶು ಪಾತ್ರದಲ್ಲಿ ತಾಯಿಗೆ ತಕ್ಕ ಮಗಳಾಗಿ ಮೆಚ್ಚುಗೆ ಪಡೆದ ನೀತಾ 'ನಾ ನಿನ್ನ ಬಿಡಲಾರೆ' ಧಾರಾವಾಹಿಯಲ್ಲಿ ನಂದಿನಿಯಾಗಿ ಅಭಿನಯಿಸುತ್ತಿದ್ದಾರೆ. ಕಾಂಚನಾ ಪಾತ್ರ ನಿರ್ವಹಿಸುತ್ತಿರುವ ಕಾವ್ಯ ಈ ಹಿಂದೆ ಕಲರ್ಸ್ ಕನ್ನಡದಲ್ಲಿ 'ಚರಣದಾಸಿ' ಧಾರಾವಾಹಿಯಲ್ಲಿ ದೀಪ ಆಗಿ ಜನಮನ್ನಣೆ ಗಳಿಸಿದ್ದರು. ಈಗ ಆ ಪಾತ್ರಕ್ಕೆ ತದ್ವಿರುದ್ಧವಾದ ದೆವ್ವದ ಪಾತ್ರದಲ್ಲೂ ಅಷ್ಟೇ ಅಚ್ಚುಕಟ್ಟಾಗಿ ಅಭಿನಯಿಸುತ್ತಿದ್ದಾರೆ. ಯಾವುದೇ ಪಾತ್ರವಾದರೂ ಅದಕ್ಕೆ ಜೀವ ತುಂಬಿ ಅಭಿನಯಿಸಬೇಕೆಂಬುದು ಅವರ ಅಭಿಪ್ರಾಯ. ಅಕ್ಷಯ್ ಪಾತ್ರ ನಿರ್ವಹಿಸುತ್ತಿರುವ ದೀಪಕ್ ಈ ಧಾರಾವಾಹಿಯ ಮೂಲಕ ಕಿರುತೆರೆಗೆ ಕಾಲಿಟ್ಟಿದ್ದಾರೆ.

ಕಿನ್ನರಿ, ಯಶೋಧೆ ಮುಂತಾದ ಹಲವಾರು ಯಶಸ್ವಿ ಧಾರಾವಾಹಿಗಳನ್ನು ನಿರ್ದೇಶಿಸಿರುವ ವಿನೋದ್ ದೋಂಢಾಲೆ ಅವರ ನಿರ್ದೇಶನ ಈ ಧಾರಾವಾಹಿಗಿದೆ. ನರಹರಿರಾವ್ ಇದರ ನಿರ್ಮಾಪಕರು. ಉಳಿದ ತಾರಾಗಣದಲ್ಲಿ ಶ್ರೀಮತಿ, ಪ್ರಶಾಂತ್, ದಿವ್ಯಾ ಕಾರಂತ್, ನರೇಶ್, ಕೃಷ್ಣಮೂರ್ತಿ ಕವತ್ತಾರ್, ಗೀತಾ ಸೂರ್ಯವಂಶಿ, ಕಾರ್ತಿಕ ಅತ್ತಾವರ ಅಭಿನಯಿಸಿದ್ದಾರೆ. ವಿಶೇಷ ಪಾತ್ರದಲ್ಲಿ ಪಾವಗಡ ಪ್ರಕಾಶ್ ಅಭಿನಯಿಸಿದ್ದಾರೆ.

ವಿಭಿನ್ನ ಕಥಾವಸ್ತು ಹೊಂದಿರುವ ಈ ಧಾರಾವಾಹಿ ಈಗಾಗಲೇ ಮನೆಮಾತಾಗಿದೆ. ಕಾಂಚನಾ ದೆವ್ವ ಅನ್ನೋ ವಿಚಾರ ನಂದಿನಿ-ಅಕ್ಷಯ್‌ಗೆ ಗೊತ್ತಾಗುತ್ತಾ? ಗೊತ್ತಾದರೆ ಕಾಂಚನಾ ಗತಿ ಏನಾಗುತ್ತದೆ? ದೆವ್ವದ ಶಕ್ತಿ ಮೇಲೋ? ದೇವರ ಶಕ್ತಿ ದೊಡ್ಡದೋ? ಕಾಂಚನಾ ತನ್ನ ಗುರಿ ಸಾಧಿಸುತ್ತಾಳಾ ನೀವೇ ನೋಡಿ.

ನಾ ನಿನ್ನ ಬಿಡಲಾರೆ

**ಸೋಮ-ಶನಿ, ರಾತ್ರಿ 9**

colors SUPER